ಇಸ್ತಿಹಾರ್.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 15ನೇ ಏಪ್ರಿಲ್ 1895.

ಇದರಿಂದ ಸಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟು ತಿರಾ ತಾಲ್ಲೂಕು ಸರ್ವೆಸೆಟ್ಲ್‌ಮೆಂಟ್ ಆಗಿ 25 ವರುಷಗಳು ಆಗುತ್ತಾ ಬಂದಿರುವ ಪ್ರಯುಕ್ತ ಸ್ಯ 1895ನೇ ಇಸವಿ ಮಾರ್ಚ್ 11ನೇ ಮಾರ್ತುಂ 14523—30—R. F. 157—93ನೇ ನಂಬರು ಗವರ್ನ್‌ಮೆಂಟ್ ಆರ್ಡರನ್ನನುಸರಿಸಿ ಸದರೀ ತಾಲ್ಲೂಕು ಕಛೇರಿ ರಿಕಾರ್ಡಿನಲ್ಲಿ ಇರುವ 1807—1808ನೇ ಪ್ರಭವ ಸಾಲ್ ಲಾಗಾಯತು 1869—70ನೇ ಕುಳ್ಳ ಸಾಲ್ ವರಿಗಿನ ದಿಟ್ಟುಚಿಟ್ಟೆ ಮತ್ತು ಕುಳವಾರು ಚಿಟ್ಟೆ ಲೆಖ್ತಗಳು ಜಲಾಯಿಸಲ್ಪಡುತ್ತವೆ.

ಸದರೀ ಚಿಟ್ಟೆ ಲೆಖ್ತಗಳ ನಕಲುಗಳನ್ನು ಪಡಿಯಲು ಆಪೇಕ್ಷೆವುಳ್ಳವರು ಈ ತಾರೀಖು ಲಾಗಾಯತು 6 ತಿಂಗಳ ವಳಗಾಗಿ ತಿರಾ ತಾಲ್ಲೂಕು ಅಮಲ್‌ದಾರ್‌ರಿಗೆ ಬರದುಕೊಂಡು ನಕಲುಗಳನ್ನು ಪಡಿಯಬಹುದು ಆ ವಾಯಿದೆ ಆದ ನಂತರ ನಕಲುಗಳು ದೊರಿಯಲಾರವು.

ಬಿ. ಕೆ. ವೆಂಕಟವರದಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 19ನೇ ಏಪ್ರಿಲ್ 1895.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಾಯಂಗುತ್ತಾ ಬಾಕೀದಾರರಾದ ಕೃಷ್ಣರಾವ್ ವಗೈರೇರಿಂದ ಬರಬೇಕಾದ ಕಾಯಂಗುತ್ತಾ ಬಾಕಿಗಾಗಿ ಇದರಡಿ ಘಾರ್ ಫಟ್ಟ್ಯಾಗಿರುವ ನಮೂದಾದ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಅಮಲದಾರ್ರ ಕಛೇರೀಲಿ 1895ನೇ ಮೇ 31ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894—95ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಾಯಂಗುತ್ತಾ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರೆಗೆ 1001—6—7 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಕೇಕಡಾ 25ನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು ದಿವಸಗಳಲ್ಲಿ ಪಾವತಿಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂತಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ, ಮತ್ತು ಅವನಿಗೆ ಆದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್‌ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ, ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ, ಎಂಬ ಅಂಶವನ್ನು ತಿಳಿಸಬೇಕೆಂತಲೂ ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್‌ಮಾಡುವ ಸಂದರ್ಭದಲ್ಲಿ ಅಂತಾ ತಮ್ಮ ಯಜಮಾನರಿಂದ ಸಹಿಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಆದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿಮಾಡಿದಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರು ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರನಲ್ಲಿ ರಿಜಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್‌ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂತಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು	ಹೋಬ್ಳಿ	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ತಫ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ ತರೀ ಬಾಗಾಯಿತು.	ವಿಸ್ತೀರ್ಣ.	ಆಕಾರ.	ಸರ್ಕಾರಕ್ಕೆ ಬರಬೇಕಾದ ಸೋಪಿನ ಪೀ ವಸ್ತಾರೆ ಸಂಪೂರ್ಣವಾದ ಬಾಕೀ ಹೊಂಬಲಗು.
1	2	3	4	5	6	7	8	9	10	11
					ರೂ. ಆ. ಪೈ.			ಖ. ಕೊ.	ರೂ. ಆ. ಪೈ.	ರೂ. ಆ. ಪೈ.
ಕೊಲಾರ.	ದಳವನೂರು.	ನಾಲ್ಲಸಂದ್ರ ಖಾಯಂ ಗುತ್ತಾ	1 ಶೆಟ್ಟಪ್ಪನವರು 2 ಸುಬ್ಬರಾಯಪ್ಪನವರು	..	.. .. .	ಪೂರಾಗ್ರಾನು.	ಖುಷ್ಕಿ ತರೀ ಬಾ ಗಾಯಿತು ಸಾಲೀಯ	45 6½ ಊ ನಾ ಸರ	148 1 2 ಕಾರ ಕ್ಕೆ ಕೊ	97 6 5 ಡಬೆಕಾ ದ್ದು
									97 6 5	
	ಹೇಮಗಲ್.	ಕ್ಯಾಲನೂರು ಖಾಯಂಗುತ್ತಿ.	ರಾಮಪ್ಪ.	..	.. .. ..	ಪೂರಾಗ್ರಾನು.	ಖುಷ್ಕಿ ತರೀ ಬಾ ಗಾಯಿತು ಸಾಲೀಯ	62 19⅞ ಊ ನಾ ಸರ	1358 13 5 ಕಾರ ಕ್ಕೆ ಕೊ	904 0 2 ಡಬೆಕಾ ದ್ದು
									1535 12 1	
									ಟೋಟ ಲ್.	1001 6 7

* ಕಾಯಂಗುತ್ತಾದಾರ್ರೆ ಆಗಲಿ ಅವರ ಹಿರಿಯರೇ ಆಗಲಿ ಭೋಗ್ಯ ವಗೈರೆ ಮಾಡಿದ ಭೂರವಿಲ್ಲದೆ ಹರಾಜು ಮಾಡಲ್ಪಡುತ್ತೆ.

ಸಿ. ಮಾದಯ್ಯ,
ಡೆಪ್ಯೂಟಿ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಡಿಪಾರ್ಟ್‌ಮೆಂಟ್.

ಪ್ರಕಟಣೆ.

ತಾರೀಖು 23ನೇ ಏಪ್ರಿಲ 1895ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಸ್ಟ್ರಿಕ್ಟ್ ದೇವರಾಯದುರ್ಗ, ಮದ್ದಗಿರಿ, ಹುಲಿಯೂರುದುರ್ಗ ಮತ್ತು ಬುಕ್ಕಾಪಟ್ಣ ಸ್ಟೇಟ್ ಫಾರೆಸ್ಟುಗಳಲ್ಲಿ ಜಮಾಯಿಸಲ್ಪಟ್ಟ 1894—95ನೇ ಸಾಲ್ ಪಸಾರೆ ಜಿನಸಿಗಳು ಈ ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಹರಾಜು ಮಾಡಲ್ಪಡುವದು.

ಸ್ಯ 1895ನೇ ಇಸವಿ ಮೇ ತಾರೀಖು 8ರಲ್ಲು ತುಮಕೂರು ಡಿಪೋದಲ್ಲಿ..

ತಫ್ಸೀಲ್.				ಪಲ್ಲ.	ಮಣ.	ಸೇರು.	
ಅಳಲೇಕಾಯಿ	..	..	..		252	..	ಸುಮಾರು
ಜೇನುತುಪ್ಪ	..	..	..		6	4	ಡಿಟೋ
ಜೇನುಮೇಣ	..	..	..		..	5	ಡಿಟೋ
ಗೇರುಬೀಜ	..	..	..		...	35	ಡಿಟೋ
ಪಚ್ಚೆ ಚಕ್ಕೆ	..	..	..		60	..	ಡಿಟೋ
ನೀಲಿ	..	..	..		4	38	ಡಿಟೋ
ಕಪಿಲಾರಂಗು	..	..	..		2	6	ಡಿಟೋ
ಅರಗು	..	..	..		13	3	ಡಿಟೋ
ಹೊಂಗೇಬೀಜ	...	..	..		..	99	ಡಿಟೋ
ದುಪ್ಪಿಕೊಂಬು	..	..	..		..	7	ಅದದು
ಹುಣಸೇಹಣ್ಣು	..	..	..		94	..	ಸುಮಾರು
ಸೀಗೇಕಾಯಿ	..	...	..		8	..	ಡಿಟೋ